21 (13) ಶ್ರೀ ಸಿದ್ದು ಸಾವದಿ (ಜಮಖಂಡಿ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ;

ಅ) ಜಮಖಂಡಿ ತಾಲ್ಲೂಕಿನಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಕಾಯ್ದಿರಿಸಿರುವ ಒಟ್ಟು ಅರಣ್ಯ ಪ್ರದೇಶವೆಷ್ಟು (ಸಂಪೂರ್ಣ ವಿವರ ಒದಗಿಸುವುದು) ;

ಆ) ಈ ಒಟ್ಟು ದಾಖಲಾತಿ ಅರಣ್ಯದಲ್ಲಿ ಒತ್ತುವರಿಯಾದ ಅರಣ್ಯ ಪ್ರದೇಶವೆಷ್ಟು ;

ಇ) ಒತ್ತುವರಿಗೆ ಕಾರಣ ಮತ್ತು ಪುನಃ ಈ ಒತ್ತುವರಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಯೋಜನೆ ಸರ್ಕಾರದ ಆಲೋಚನೆ ಯಲ್ಲಿದೆಯೇ ;

ಈ) ಹಾಗಿದ್ದಲ್ಲಿ, ಸರ್ಕಾರ ಯಾವಾಗ ಕ್ರಮ ಕೈಗೊಳ್ಳುತ್ತದೆ ;

ಉ) ಸದರಿ ತಾಲ್ಲೂಕಿನಲ್ಲಿ ದಿನಾಂಕ: 01.04.02 ರಿಂದ ಈವರೆವಿಗೂ ಅರಣ್ಯ ಬೆಳೆಸಲು ಸರ್ಕಾರದಿಂದ ಖರ್ಚಾದ ಒಟ್ಟು ಹಣವೆಷ್ಟು ಹಾಗೂ ಒಂದು ಸಸಿಯನ್ನು ಮರವಾಗಿ ಬೆಳೆಸಲು ಖರ್ಚಾಗುವ ಹಣವೆಷ್ಟು (ವಿವರ ಒದಗಿಸುವುದು) ;

ಊ) ಈ ತಾಲ್ಲೂಕಿನಲ್ಲಿ ಅರಣ್ಯೀಕರಣಗೊಳಿಸಿರುವ ಪ್ರದೇಶವೆಷ್ಟು ; ಎಷ್ಟು ಗಿಡಗಳನ್ನು ನೆಡಲಾಗಿದೆ ಮತ್ತು ಅವುಗಳ ಸಂರಕ್ಷಣೆಗೆ ಯಾವ ರೀತಿ ಕ್ರಮ ಕೈಗೊಳ್ಳಲಾಗಿದೆ.

**ಶ್ರೀ ಸಿ ಚನ್ನಿಗಪ್ಪ (ಅರಣ್ಯ ಸಚಿವರು):**

ಅ)

| ಬೀಟ್ | | ವಿಸ್ತೀರ್ಣ ಹೆಕ್ಟೇರ್‌ಗಳಲ್ಲಿ |
|---|---|---|
| 1 | ಜಮಖಂಡಿ | 2017.93 |
| 2 | ಕುಂಚನೂರ | 1611.27 |
| 3 | ಸಿದ್ದಾಪುರ | 2019.76 |
| 4 | ಕುಳ್ಳಳ್ಳಿ | 1839.99 |
| 5 | ಸಾವಳಗಿ | 1184.01 |
| 6 | ತುಂಗಳ | 724.31 |
| 7 | ಬನಹಟ್ಟಿ | 1085.00 |
| 8 | ತೇರದಾಳ | 334.55 |
| | ಒಟ್ಟು | 10816.82 |

ಆ) ಒತ್ತುವರಿಯಾದ ಅರಣ್ಯ ಪ್ರದೇಶ 299.67 ಹೆಕ್ಟೇರು.

ಇ) 1978ರ ಪೂರ್ವದಲ್ಲಿ ಆದ ಅರಣ್ಯ ಒತ್ತುವರಿಯನ್ನು ಸರ್ಕಾರದ ಆದೇಶ ಸಂಖ್ಯೆ: ಅಪಜೀ 05 ಎಫ್‌ಜೆಎಲ್ 90, ದಿನಾಂಕ: 05.05.1997 ರ ಪ್ರಕಾರ ಪರಿಶೀಲಿಸಿ ಸಕ್ರಮಗೊಳಿಸಲು ಯೋಗ್ಯವಾಗಿರುವ ಪ್ರಕರಣಗಳನ್ನು ಸಕ್ರಮಗೊಳಿಸಲಾಗುತ್ತಿದೆ. ಉಳಿದ ಪ್ರಕರಣಗಳಲ್ಲಿ ಅರಣ್ಯ ಕಾಯ್ದೆ 1963ರ ಪ್ರಕಾರ ಅನಧಿಕೃತ ಒತ್ತುವರಿ ತೆರವುಗೊಳಿಸಿ ಅರಣ್ಯ ಭೂಮಿಯನ್ನು ಇಲಾಖೆಯ ವಶಕ್ಕೆ ತೆಗೆದುಕೊಳ್ಳಲು ಕ್ರಮವಹಿಸಲಾಗುತ್ತಿದೆ.

ಈ) ಈ ಮೇಲಿನಂತೆ ಕ್ರಮ ವಹಿಸಲಾಗುತ್ತಿದೆ.

ಉ)

| ವರ್ಷ | ಖರ್ಚು (ರೂ.) |
|---|---|
| 2002–03 | 882574 |
| 2003–04 | 346700 |
| 2004–05 | 248710 |
| 2005–06 | 761720 |
| 2006–07 | 227096 |
| ಒಟ್ಟು | 2466800 |

ಒಂದು ಸಸಿಯನ್ನು ನೆಟ್ಟು ಮುಂದಿನ ಮೂರು ವರ್ಷಗಳವರೆಗೆ ಪೋಷಿಸಿ ಬೆಳೆಸಲು ಖರ್ಚಾಗುವ ಅಂದಾಜು ಹಣ ಈ ಕೆಳಗಿನಂತಿದೆ, ನೆಡುತೋಪುಗಳಲ್ಲಿ ಬೆಳೆಸಿದ ಸಸಿಗೆ ರೂ. 54/– ರಸ್ತೆ ಬದಿಯಲ್ಲಿ ಬೆಳೆಸಿದ ಸಸಿಗೆ ರೂ. 328/– (ರಕ್ಷಾ ಕವಚ ಮತ್ತು ನೀರು ಉಣಿಸುವ ಖರ್ಚು ಇತ್ಯಾದಿ ಸೇರಿ).

ಊ) ಈ ತಾಲ್ಲೂಕಿನಲ್ಲಿ 01.04.2002 ರಿಂದ ಇಲ್ಲಿಯವರೆಗೆ ಒಟ್ಟು 284.39 ಹೆಕ್ಟೇರು ಪ್ರದೇಶದಲ್ಲಿ 191600 ಸಸಿಗಳನ್ನು ನೆಡಲಾಗಿದೆ. ಸದರಿ ಸಸಿಗಳ ರಕ್ಷಣೆಗೆ ನೆಟ್ಟ ವರ್ಷದಿಂದ ಮುಂದಿನ ಮೂರು ವರ್ಷಗಳವರೆಗೆ ಕಾವಲುಗಾರರನ್ನು ನೇಮಿಸಿ, ಸಂರಕ್ಷಣಾ ಕ್ರಮ ಕೈಗೊಳ್ಳಲಾಗುತ್ತಿದೆ.

22 (47) ಶ್ರೀ ಸಿದ್ದು ಸಾವದಿ (ಜಮಖಂಡಿ) : ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ;

ಅ) ಜಮಖಂಡಿ ತಾಲ್ಲೂಕಿನಲ್ಲಿರುವ ಕೆರೆಗಳ ಸಂಖ್ಯೆ ಹಾಗೂ ಅವುಗಳ ನೀರಿನ ಸಾಮರ್ಥ್ಯ ಎಷ್ಟು ; (ಕೆರೆವಾರು ವಿವರ ನೀಡುವುದು) ;